1. ಡಾಂಬರ್ ಪದರ ಹೊಂದಿರುವ ರಸ್ತೆ ರೂ. 19200.00
2. ಜಲ್ಲಿ ಮೇಲ್ಪೈ ಹೊಂದಿರುವ ರಸ್ತೆ ರೂ. 13800.00
3. ಮಣ್ಣಿನ ರಸ್ತೆ ರೂ. 9600.00

ಇ) ಪ್ರಸ್ತುತ ಸಾಲಿನಲ್ಲಿ ಧಾರವಾಡ ಜಿಲ್ಲೆಗೆ 44-64 ಲಕ್ಷ ರೂ.ಗಳ ಭಾಗಶಃ ಅನುದಾನವನ್ನು ದಿನಾಂಕ: 02-07-2002 ರಂದು ಬಿಡುಗಡೆ ಮಾಡಲಾಗಿದ್ದು ವಿವರಗಳು ಈ ಕೆಳಕಂಡಂತಿದೆ.

1.	ಸಾಮಾನ್ಯ ದುರಸ್ತಿಗೆ	ರೂ. 11.00	ಲಕ್ಷಗಳು
2.	ನವೀಕರಣಕ್ಕೆ	ರೂ. 15.00	ಲಕ್ಷಗಳು
3.	ವಿಶೇಷ ದುರಸ್ತಿಗೆ	ರೂ. 15.00	ಲಕ್ಷಗಳು
4.	ಸೇತುವೆ ದುರಸ್ತಿಗೆ	ರೂ. 03.64	ಲಕ್ಷಗಳು
	ಒಟ್ಟು	ರೂ. 44.64	ಲಕ್ಷಗಳು

ಸದರಿ ಅನುದಾನವನ್ನು ಮುಂದುವರೆದ ರಸ್ತೆ ಕಾಮಗಾರಿಗಳಿಗೆ ಹಾಗೂ ದುರಸ್ತಿ ಕಾಮಗಾರಿಗಳಿಗೆ ಉಪಯೋಗಿಸಲಾಗುವುದು.

ಹುಬ್ಬಳ್ಳಿ ಧಾರವಾಡ ಮಹಾನಗರ ವ್ಯಾಪ್ತಿಯಲ್ಲಿ ಹೃದಯ ರೋಗ ಆಸ್ಪತ್ರೆ

481(558) - ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) :ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ - ಧಾರವಾಡ ಮಹಾನಗರ ವ್ಯಾಪ್ತಿಯಲ್ಲಿ ಎಲ್ಲಾ ಸೌಲಭ್ಯವುಳ್ಳ ಹೃದಯ ರೋಗ ಆಸ್ಪತ್ರೆ ಪ್ರಾರಂಭಿಸುವ ವಿಚಾರ ಗಮನದಲ್ಲಿದೆಯೇ;

ಆ) ಉತ್ತರ ಕರ್ನಾಟಕದಲ್ಲಿ ಹೃದಯರೋಗ ಆಸ್ಪತ್ರೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಆಸ್ಪತ್ರೆ ಪ್ರಾರಂಭಿಸಲು ಸ್ಥಳ ಆಯ್ಕೆ ಮಾಡಲಾಗಿದೆಯೇ; ಇಲ್ಲವಾದಲ್ಲಿ ಕಾರಣವೇನು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಇಲ್ಲ.

ಆ) ರಾಯಚೂರಿನಲ್ಲಿ ಓಪೆಕ್ ಆಸ್ಪತ್ರೆ ಈ ತಜ್ಞ ಸೌಲಭ್ಯವನ್ನು ಹೊಂದಿರುತ್ತದೆ.

ಇ) ಉತ್ತರದಿಂದ ಉದ್ಭವಿಸುವುದಿಲ್ಲ.

ಕರ್ನಾಟಕ ಗೃಹ ಮಂಡಳಿಯಿಂದ ಮನೆ ನಿರ್ಮಾಣ

482(918) - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?